ಅ) ಬಂದಿದೆ.

ಆ) ತುಮಕೂರು ಜಿಲ್ಲಾ ಪರಿಷತ್‌ನಿಂದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಅವಶ್ಯಕವಾದ ನಿವೇಶನ ಮತ್ತು ಸೂಕ್ತವಾದ ಹಣ ಒದಗಿಸಿ, ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ ಸರ್ಕಾರದವರು ಚಿಕ್ಕನಾಯಕನಹಳ್ಳಿಯಲ್ಲಿ ಸಾರ್ವಜನಿಕ ಆಸ್ಪತ್ರೆ ಇಲ್ಲವೆಂದು ಒಪ್ಪಿಕೊಂಡಿದ್ದಾರೆ. ಆದರೆ ಒಂದೇ ಒಂದು ತೊಡಕು ಆಗಿದೆ. ಜಿಲ್ಲಾ ಪರಿಷತ್‌ನವರು ಹಣ ಒದಗಿಸಿದರೆ ಮಾಡುತ್ತೇವೆ ಎಂದು ಹೇಳಿದ್ದಾರೆ. ಇದು ನನಗೆ ಅರ್ಥ ಆಗಿಲ್ಲ. ಜಿಲ್ಲಾ ಪರಿಷತ್‌ನವರು ಅಲ್ಲಿ ಒಂದು ಜನರಲ್ ಹಾಸ್ಪಿಟಲ್ ಅಥವಾ ಕಮುನಿಟಿ ಹೆಲ್ತ್ ಸೆಂಟರ್ ಮಾಡುವುದಕ್ಕೆ ಏಕೆ ಹಣ ಒದಗಿಸಬೇಕು? ನಿವೇಶನ ಒದಗಿಸಿ ಎಂದು ಕೇಳಿರುವುದು ವಾಸ್ತವ, ಅದನ್ನು ಒದಗಿಸಲಿಕ್ಕೆ ನಾವು ಅಲ್ಲಿ ಪ್ರಸ್ತಾಪ ಮಾಡುತ್ತೇವೆ. ಹಣವನ್ನು ತಾವೇ ಒದಗಿಸಿಕೊಡಬೇಕಾಗುತ್ತದೆ. ಆದ್ದರಿಂದ ಯಾವಾಗ ಹಣವನ್ನು ಒದಗಿಸಿ ಅಲ್ಲಿ ಆಸ್ಪತ್ರೆ ಮಾಡಿಕೊಂಡುತ್ತೀರಿ ಎಂದು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಅಧ್ಯಕ್ಷರೆ,ಅಲ್ಲಿ ಈಗಾಗಲೇ ಪ್ರಾಥಮಿಕ ಆರೋಗ್ಯ ಕೇಂದ್ರವು ಕಾರ್ಯನಿರ್ವಹಣೆ ಮಾಡುತ್ತಿದೆ. ಇದನ್ನು ಮೇಲ್ದರ್ಜೆಗೆ ಏರಿಸಬೇಕೆಂಬ ಆಸೆ ನಮಗೂ ಇದೆ. ಅದರ ಜಿಲ್ಲಾಪರಿಷತ್‌ನವರು ಅದಕ್ಕೆ ಸ್ಥಳ ಮತ್ತು ಹಣವನ್ನು ಒದಗಿಸಿಕೊಡಬೇಕಾದುದು ನಿಯಮ ಆ ನಿಯಮದ ಪ್ರಕಾರ ಅವರು ಒದಗಿಸಿಕೊಟ್ಟರೆ ನಾವು ಅದನ್ನು ಮೇಲ್ದರ್ಜೆಗೆ ಏರಿಸುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ದಯಮಾಡಿ ಇದನ್ನು ಸರಕಾರದವರೇ ಮಾಡಬೇಕಾಗುತ್ತದೆ. ಪ್ಲಾನ್‌ನಲ್ಲಿ ಇದನ್ನು ಸರಕಾರದವರು ಒದಗಿಸಿಕೊಡಬೇಕಾದಂಥಾದ್ದು. ಸರಕಾರದವರು ಹಣವನ್ನು ಒದಗಿಸಿದ ಮೇಲೆ ಜಿಲ್ಲಾಪರಿಷತ್ತ್‌ನವರು ಪೇಮೆಂಟ್ ಮಾಡಿಕೊಂಡು ಬರುತ್ತಾರೆ. ಹೀಗೆ ತಮಗೆ ಇರುವ ಅಧಿಕಾರವನ್ನು ಹೇಳುವುದನ್ನು ಬಿಟ್ಟು ಜಿಲ್ಲಾಪರಿಷತ್ತ್‌ನವರು ಮಾಡಬೇಕಾಗಿದೆ ಎಂದು ಏತಕ್ಕೆ ಹೇಳುತ್ತಿರೋ ಎಂಬುದು ನನಗೆ ಅರ್ಥವಾಗುತ್ತಿಲ್ಲ.ಈ ಒಂದು ಕಾರ್ಯಕ್ರಮವನ್ನು ತಕ್ಷಣ ಮಾಡದೇ ಹೋದರೆ ಬೇಸಿಕ್ ರಿಕ್ವಾಯರ್‌ಮೆಂಟ್ಸ್ ಏನಿದೆ ಅಂದರೆ ವಿಕ್ಸ್‌ರೇ ತೆಗೆಯುವುದಕ್ಕೆ ಬ್ಲಡ್ ಕೊಡಲಿಕ್ಕೆ ಯಾವ ವ್ಯವಸ್ಥೆಯೂ ತಾಲ್ಲೂಕು ಕೇಂದ್ರಗಳಲ್ಲಿ ಇಲ್ಲ. ಅದಕ್ಕಾಗಿ ನಾವು ತುಮಕೂರಿಗೆ ಬರಬೇಕಾಗುತ್ತದೆ.ಅಲ್ಲಿಗೆ ಬರುವವರೆಗೆ ರೋಗಿಗಳು ಉಳಿಯುವ ಸ್ಥಿತಿ ಇಲ್ಲ. ಆದುದರಿಂದ ಇದನ್ನು ಆದ್ಯತೆಯ ಮೇಲೆ ತೆಗೆದುಕೊಂಡರೆ, ಸೈಟ್‌ನ್ನು ಕೊಡುವ ಕೆಲಸವನ್ನು ನಾವು ಸ್ಥಳೀಯವಾಗಿ ಕುಳಿತು ಮಾಡುತ್ತೇವೆ. ಆದ್ದರಿಂದ ದಯವಿಟ್ಟು ಈ ಒಂದು ಕೆಲಸವನ್ನು ಆದ್ಯತೆಯ ಮೇಲೆ ತೆಗೆದುಕೊಳ್ಳಬೇಕೆಂದು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಮಾನ್ಯ ಸದಸ್ಯರ ಕೋರಿಕೆಯನ್ನು ನಾನು ಪರಿಶೀಲಿಸುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಎಂ. ರಾಮಪ್ಪನವರು ಗೈರು ಹಾಜರಾಗಿದ್ದರು)

ಬಳ್ಳಾರಿ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರುಗಳ ಹುದ್ದೆಗಳು

41 - ಶ್ರೀ ಕೆ.ವಿ. ರವೀಂದ್ರನಾಥ ಬಾಬು (ಕೊಟ್ಟೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಳ್ಳಾರಿ ಜಿಲ್ಲೆಯಲ್ಲಿರುವ ಒಟ್ಟು ಆಸ್ಪತ್ರೆಗಳ ಸಂಖ್ಯೆ ಎಷ್ಟು ?

ಆ) ಸದರಿ ಆಸ್ಪತ್ರೆಗಳಲ್ಲಿರುವ ವೈದ್ಯಾಧಿಕಾರಿಗಳ ಖಾಲಿ ಹುದ್ದೆಗಳು ಎಷ್ಟು ಮತ್ತು ಯಾವ ದಿನಾಂಕದಿಂದ ಖಾಲಿ ಇವೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು) :

ಅ) 72 (ಪ್ರಾಥಮಿಕ ಆರೋಗ್ಯ ಕೇಂದ್ರ ಘಟಕಗಳು ಸೇರಿ)

ಆ) ಅನುಬಂಧದಲ್ಲಿರುವಂತೆ.

ANNEXURE

Sl. No.	Name of the place	No. of Vacancies	Since When vacant
1.	Urban Health & Family Welfare Centre, Bellary	1	November 90
2.	PHC, Kurugodu	1	June 90
3.	PHC, Orvai	1	June 90
4.	PHC Kuruvalli -	1	Sept. 90
5.	PHC, Gadiganur	1	August 89
6.	PHC, Mariyammanahally	1	Octo. 90
7.	PHC, Srirama Rangapura	1	Sept. 90
8.	MLCU, Hospet	1	April 89
9.	PHC, Kamalapur	1	Jan. 89
10.	PHC, Hampasagara	1	Oct. 90
11.	PHC, Modigere	1	Sept. 90
12.	PHC, Thambrali	1	April. 89
13.	PHC, Itagi	1	Jan. 90
14.	PHU, K. Ayyanahally	1	Jan. 89
15.	PHU, Magal	1	July 90
16.	PHU, Haraknal	1	April 89
17.	PHC, Kottur	1	Sept. 90
18.	PHC, Bellighatta	1	Sept. 90
19.	PHC, Gudekote (ICDS)	1	Jan. 90
20	PHU, Alur	1	Sep 90
21.	CHC, Sandur	1	July 90
22.	PHC, Bandri	1	June 88
23.	PHU, Matrike	1	Decem. 90
24.	PHU, Gandhinagar, Bellary	1	July 88
25.	PHU, Hanasi	1	July 90
26.	PHU, Bennehally	1	July 90

27.	PHC, Choranur	2	Octo. 90
28.	~~PHC, Raviela~~	1	Jan. 91
29.	PHC, Challagurki	1	Feb. 91
30.	LCDR, Bellary	2	Jan. 90
31.	Medical College Hospital, Bellary.	2	Jan. 90
	Total	34	

ಶ್ರೀ ಕೆ.ವಿ. ರವೀಂದ್ರನಾಥ್ ಬಾಬು : ಮಾನ್ಯ ಅಧ್ಯಕ್ಷರೇ ಬಳ್ಳಾರಿ ಜಿಲ್ಲೆಯಲ್ಲಿ ಆಸ್ಪತ್ರೆಗಳು ಎಷ್ಟಿವೆ ಎಂದು ಕೇಳಿದ್ದಕ್ಕೆ 72 ಆಸ್ಪತ್ರೆಗಳು ಇವೆ ಎಂದು ಮಾನ್ಯ ಸಚಿವೆಯವರು ಉತ್ತರವನ್ನು ಕೊಟ್ಟಿದ್ದಾರೆ. 1988ರಿಂದಲೂ 34 ಡಾಕ್ಟರುಗಳ ಹುದ್ದೆಗಳು ಖಾಲಿ ಇವೆ. ಇದನ್ನು ಯಾವಾಗ ಫಿಲ್ ಅಪ್ ಮಾಡುತ್ತೀರಿ? ಇದರಲ್ಲಿ ಲೇಡಿ ಮೆಡಿಕಲ್ ಆಫಿಸರ್ಸ್ ಮೇಲ್ ಡಾಕ್ಟರ್ಸ್ ಅನ್ನು ಪೋಸ್ಟ್ ಮಾಡಬೇಕು. ಇಷ್ಟು ಮಂದಿಯನ್ನು ಯಾವಾಗ ತುಂಬುತ್ತೀರಿ? ಇದಕ್ಕೆ ಅಂತಿಮವಾಗಿ ಒಂದು ಸಮಯ ನಿಗದಿಯನ್ನು ತಾವುಗಳು ಹೇಳಬೇಕು. ನಮ್ಮ ಪಕ್ಕದ ಜಿಲ್ಲೆಗೆ ವೈದ್ಯೋಪಚಾರಕ್ಕೆ ಹೋಗೋಣ ಅಂದರೆ ಅಲ್ಲಿಯೂ ಕೂಡ ಸೂಕ್ತ ಸೌಲಭ್ಯಗಳು ಇಲ್ಲ. ಇದರಿಂದಾಗಿ ಗ್ರಾಮಾಂತರ ಪ್ರದೇಶಗಳ ಜನರಿಗೆ ತುಂಬಾ ತೊಂದರೆಯಾಗಿದೆ. ಆದುದರಿಂದ ಯಾವಾಗ ಈ ಖಾಲಿಯಾಗಿರುವ ಹುದ್ದೆಗಳನ್ನು ತುಂಬಿ ಜನರಿಗೆ ಅನುಕೂಲ ಮಾಡಿಕೊಡುವಿರಿ ಎಂಬ ಬಗ್ಗೆ ಹೇಳಬೇಕು.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ರಾಜ್ಯದಲ್ಲಿ ವೈದ್ಯಾಧಿಕಾರಿಗಳನ್ನು ಈಗ ತಾನೆ ನಾವು ರಿಕ್ರೂಟ್‌ಮೆಂಟ್ ಮಾಡಿದ್ದೇವೆ. ಈ ವಿಚಾರದ ಬಗ್ಗೆ ಈಗಾಗಲೇ ಒಂದು ಪ್ರಶ್ನೆಗೆ ಉತ್ತರಿಸುತ್ತಾ ಹೇಳಿದ್ದೇನೆ. ಈಗ ಅವರ ವೈದ್ಯಕೀಯ ತಪಾಸಣೆಗಾಗಿ ಮತ್ತು ಪೋಲೀಸ್ ವೆರಿಫಿಕೇಶನ್‌ಗಾಗಿ ಹೋಗಿದೆ. ಅದು ಬಹುಶಃ ಈ ತಿಂಗಳೊಳಗಾಗಿ ಅಥವಾ ಬರುವ ತಿಂಗಳ ಮೊದಲನೇ ವಾರದಲ್ಲಿ ಬರಬಹುದು. ಆದಷ್ಟು ಬೇಗ ಅವರನ್ನು ತುಂಬಿಸಿಕೊಡುತ್ತೇವೆ.

ಶ್ರೀ ಕೆ.ವಿ. ರವೀಂದ್ರನಾಥ ಬಾಬು : ಆಸ್ಪತ್ರೆಗಳ ಲಿಸ್ಟನ್ನು ಏನು ಕೊಟ್ಟಿದ್ದಾರೆ, ಅದರಲ್ಲಿ ಚಿಕ್ಕಜೋಗಿಹಳ್ಳಿಯ ಜನರಲ್ ಆಸ್ಪತ್ರೆಯ ಹೆಸರಿಲ್ಲ. ಅಲ್ಲಿ ಎಷ್ಟು ಹುದ್ದೆಗಳು ಖಾಲಿ ಇವೆ ಎಂಬ ಬಗ್ಗೆಯೂ ಲಿಸ್ಟ್‌ನಲ್ಲಿ ಬಂದಿಲ್ಲ. ಇದು ಯಾವ ಕಾರಣದಿಂದಾಗಿ ಈ ಪಟ್ಟಿಯಲ್ಲಿ ಬಿಟ್ಟು ಹೋಗಿದೆ ಎಂಬುದು ಅರ್ಥವಾಗುತ್ತಿಲ್ಲ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಬಹುಶಃ ಅದು ಟೈಪಿಂಗ್ ಎರರ್ ಇರಬಹುದು. ಅದನ್ನು ಸರಿಪಡಿಸುತ್ತೇನೆ.

ಬೆಂಗಳೂರಿನಲ್ಲಿರುವ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಬಗ್ಗೆ

16 - ಶ್ರೀ ಕೆ. ಲಕ್ಷ್ಮಣ್ (ಕುಣಿಗಲ್) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿರುವ ಸರ್ಕಾರಿ ಪ್ರಾರ್ಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಬಹುತೇಕ ಶಾಲೆಗಳಲ್ಲಿ ಅವಶ್ಯಕತೆ ಇರುವಷ್ಟೂ ಕೂಡ ಕಟ್ಟಡ ಹಾಗೂ ಪೀಠೋಪಕರಣಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?